ಕರಿಯೋದು..."

"ಒಮ್ಮೆ ಮನೆ ನೋಡೋಣವೆ? ರುದ್ರಮುನಿಯ ಪತ್ತೆಗೆ ನೆರವಾಗುವಂತಹದು ಏನಾದ್ರೂ ಸಿಕ್ಕಬಹುದು..."

ಹಜಾರದಿಂದ ಬಲಕ್ಕೆ ಉದ್ದನೆಯ ಮೊಗಸಾಲೆ. ಮಧ್ಯೆ ಎಡದಲ್ಲಿ ಹಜಾರಕ್ಕೆ ಸಮಾಂತರವಾಗಿ ಒಂದು ಕೊಠಡಿ. ಅದರಲ್ಲಿ ಹೂವಿನ ಚಿತ್ತಾರವಿರುವ ಕಾಂಕ್ರೀಟು ಕಿಟಕಿ. ರುದ್ರಮುನಿ ಬಹುಶಃ ಅದೇ ಕೋಣೆಯಲ್ಲಿದ್ದ ಏಡುಕೊಂಡಲುವಿನ ಹೆಂಡ್ತಿಯನ್ನು ಕಂಡಿದ್ದು! ಅಲ್ಲಿಂದ ಹೊರಬಂದರೆ ಹಜಾರದಲ್ಲಿ ಕುಳಿತಿರುವವರಿಗೆ ಕಾಣಲೇಬೇಕು!! ನಾವು ಆ ಕೊಠಡಿಯೊಳಗೆ ಅಡಿಯಿರಿಸಿದೆವು.

"ಇದ್ ಎನ್ನ್ ಸ್ಟಡಿ ರೂಮು. ಎಂಗೆ ಓದ್‌ವ ಹುಚ್ಚು..."

ಸಾಕಷ್ಟು ವಿಶಾಲವಾದ ಕೊಠಡಿಯಲ್ಲಿ ಎರಡು ಹಳೆಯ ಮರದ ಕಪಾಟು, ಕುರ್ಚಿ, ಮೇಜು, ರೀಡಿಂಗ್ ಲ್ಯಾಂಪು, ಪುಸ್ತಕಗಳ ರಾಶಿಗಳು, ಸ್ಥಿರ ದೂರವಾಣಿ ಎಲ್ಲಾ ಇದ್ದವು. ಕಾವಿ ಹಾಕಿದ ನೆಲ ತಂಪಾಗಿತ್ತು. ಟೆಲಿಫೋನ್ ಪಕ್ಕದಲ್ಲಿದ್ದ ಪುಸ್ತಕವೊಂದರಲ್ಲಿ ಗೀಚಿದ್ದ ಬರಹ ನನ್ನ ಗಮನ ಸೆಳೆಯಿತು. ಇಂಗ್ಲಿಷಿನಲ್ಲಿ ಸಂಕೇತಗಳಿದ್ದಂತೆ ತೋರುವ ಬರಹ... **one bid, /hr two. . UAHBP**ಇನ್ನೂ ಏನೇನೋ ಗೀಚಿತ್ತು. ನಾನು ಅದನ್ನು ಕರಮಚಂದನಿಗೆ ಕಾಣಿಸಿದೆ. ಅದನ್ನೊಮ್ಮೆ ನೋಡಿ ಆತ ಕಿರುನಕ್ಕ. ಆತ ಕಪಾಟಿನ ಗಾಜಿನ ಬಾಗಿಲಿಂದ ತೋರುತ್ತಿದ್ದ ಪುಸ್ತಕಗಳನ್ನು ಆಸ್ಥೆಯಿಂದ ಗಮನಿಸುತ್ತಿದ್ದ. ಮತ್ತೆ ಆ ಕಪಾಟಿನ ಹಲಗೆಯ ಮೇಲೆ ಮೆಲ್ಲಗೆ ಬಡಿದು ಪರೀಕ್ಷಿಸಿದ, ಮರದ ಗುಣಮಟ್ಟ ನೋಡುವವನಂತೆ. ಇನ್ನೊಂದು ಕಪಾಟಿನಲ್ಲಿದ್ದ ಒಂದು ಚರ್ಮದ ಚೀಲದಲ್ಲಿ ಕತ್ತರಿ, ಹತ್ತಿ ಇನ್ನೂ ಏನೇನೋ ವಸ್ತುಗಳಿದ್ದವು. ನಮ್ಮ ಪರಿಶೀಲನೆಯನ್ನು ಏಡುಕೊಂಡಲು ಕುತೂಹಲದಿಂದ ನಿರುಕಿಸುತ್ತಿದ್ದ. ಅಲ್ಲಿಂದ ಹೊರಬಿದ್ದು, ಮೊಗಸಾಲೆಯಲ್ಲಿ ನಡೆದು, ಇನ್ನೊಂದು ವಿಶಾಲ ಕೋಣೆ ಸೇರಿದೆವು. ಅದಕ್ಕೆ ಹೊಂದಿಕೊಂಡಂತಿದ್ದ ಎರಡು ಕೊಠಡಿಗಳ ಬಾಗಿಲುಗಳಲ್ಲಿ ಬೀಗ ನೇತಾಡುತ್ತಿತ್ತು! ಅದರ ಪಕ್ಕದಲ್ಲಿ ಕಿಚನ್. ಹೊರಗೆ ಹಿಂಭಾಗದಲ್ಲಿ ಹಗ್ಗದಲ್ಲಿ ಒಣ ಹಾಕಿದ್ದ ಬಟ್ಟೆಗಳು ಗೋಚರಿಸಿದವು. ಎಲ್ಲಿಯೂ ಹೆಂಡತಿಯ ಸುಳಿವು ಇರಲಿಲ್ಲ.

"ಯಾಕೆ ಬೀಗ ಹಾಕಿದ್ದು?"

"ಅಲ್ ಬೇಡದ್ ಸಾಮಾನ್ ಇಟ್ಟಿತ್. ಬೇಕಾದ್ರೆ ನೋಟಿ..'' ಹಾಗೆಂದು ಬೀಗ ತೆಗೆದು ತೋರಿಸಿದ ಏಡುಕೊಂಡಲು.

ಅಷ್ಟರಲ್ಲಿ 'ಒಂದು ಫೋನು ಮಾಡುವುದಿದೆ' ಅಂತ ಕರಮಚಂದ ಆ ಕಡೆ ಸರಿದು ಹೋದ. ನಾನು ಆ ಕೋಣೆಯ ಪರಿಶೀಲನೆ ಮುಂದುವರೆಸಿದೆ. ಅವನಂದಂತೆ ಉಪಯೋಗವಿಲ್ಲದ ಅನೇಕ ವಸ್ತುಗಳು ಅಲ್ಲಿದ್ದವು. ಮುರಿದ ಕುರ್ಚಿ, ಪೆಟ್ಟಿಗೆಗಳು, ಪುಸ್ತಕಗಳು, ಇನ್ನು ಏನೇನೋ. ಕರಮಚಂದ ಹಿಂದಿರುಗುವವರೆಗೂ ನಾನು ಅದನ್ನು ನೋಡುತ್ತಲೇ ಇರಬೇಕಾಯಿತು.

"ಏಡುಕೊಂಡಲು, ನಿಮ್ಗೆ ಧನ್ಯವಾದ. ರುದ್ರಮುನಿಯ ಬಗ್ಗೆ ಗೊತ್ತಾದರೆ ತಿಳಿಸ್ತೀವಿ. ನೀವು ಅವನಿಂದ ಹಣ ವಸೂಲಿ ಮಾಡಬಹುದು!" ನಾಟಕೀಯವಾಗಿ ಕರಮಚಂದ ಹೇಳಿದ.

★★★

ಆ ದಿನ ಒಂದು ಅನಿರೀಕ್ಷಿತ ಘಟನೆ ನಡೆಯಿತು. ಕರಮಚಂದ ಬೆಳಿಗ್ಗೆ ನಾನು ಏಳುವ ಮುನ್ನವೇ ಕಾಣೆಯಾಗಿದ್ದ. ಕಳೆದ ಕೆಲವು ದಿನಗಳಿಂದ ಇದು ನಡಿತಿತ್ತು. ರಾತ್ರಿ ನಾನು ಮಲಗಿದ